ಪ್ರಮಾಣ ವಚನ ಭೋದಿಸಿದ ದಿನಾಂಕಃ 20.01.2024.

ಮುಂದುವರೆದ ಪಾಟೀ ಸವಾಲುಃ ಆರೋಪಿತನ ಪರ ವಕೀಲರಿಂದಃ

ಘಟನೆಯ ದಿನ ನಮ್ಮ ಜೊತೆಯಲ್ಲಿದ್ದವರು ಸಹ ಆರೋಪಿಯನ್ನು ತಡೆಯಲು ಪ್ರಯತ್ನಪಟ್ಟರು ಆದರೆ ಆಗಲಿಲ್ಲ. ಆರೋಪಿ ನಿನ್ನ ಮಗನನ್ನು ಹೊಡೆಯುವುದನ್ನು ತಪ್ಪಿಸಲು ಹೋದಾಗ ನಿನ್ನನ್ನು ಆರೋಪಿ ಹೊಡೆದನಾ ಎಂದರೆ ನಾನು 10-12 ಅಡಿ ದೂರದಲ್ಲಿ ಇದ್ದೆ ಎಂದು ನುಡಿಯುತ್ತಾರೆ. ಆರೋಪಿ ಆ ಸಮಯದಲ್ಲಿ ನನಗೆ ಬೈಯ್ಯಲಿಲ್ಲ. ಆರೋಪಿ ಆ ಸಮಯದಲ್ಲಿ ನನಗೆ ಮತ್ತು ನನ್ನ ಜೊತೆ ಟ್ರಾಕ್ಟರ್ ನಲ್ಲಿದ್ದವರಿಗೆ ಹೊಡೆದಿರುವುದಿಲ್ಲ. ಆರೋಪಿ ನನ್ನ ಮಗನಿಗೆ ಹೊಡೆದ ನಂತರ ನನ್ನ ಜೊತೆಗೆ ಇದ್ದವರು ಆರೋಪಿಯನ್ನು ಹಿಡಿದುಕೊಳ್ಳಲು ಪ್ರಯತ್ನಪಟ್ಟಿಲ್ಲ. ಟ್ರಾಕ್ಟರ್ ಮೇಲೆ ಹುಡ್ ನ್ನು ನೆರಳಿಗೋಸ್ಕರ ಹಾಕಿರುತ್ತೇವೆ ಎಂದರೆ ಹೌದು. ಸದರಿ ಹುಡ್ ಹಾಕುವಾಗ 4 ಕಂಬಗಳು ಇದ್ದು ಅವುಗಳನ್ನು ಜೋಡಿಸಿರುತ್ತಾರೆ ಎಂದರೆ ನಮ್ಮ ಟ್ರಾಕ್ಟರ್ ಗೆ ಹುಡ್ ಇರಲಿಲ್ಲ ಎಂದು ನುಡಿಯುತ್ತಾರೆ.

ದೊಣ್ಣೆಯನ್ನು 6-8 ಅಡಿ ಎತ್ತರದಲ್ಲಿ ಬೀಸಿದರೆ ಹೊಡೆತ ಬೀಳುವುದಿಲ್ಲ ಎಂದರೆ ಸರಿಯಲ್ಲ. ಟ್ರಾಕ್ಟರ್ ಮತ್ತು ಟ್ರೇಲರ್ ನ ಲಾಕ್ ಸಿಸ್ಟಂ ಟ್ರಾಕ್ಟರ್ ನ ಹಿಂಬದಿಗೆ ಬರುತ್ತದೆ ಎಂದರೆ ಹೌದು. ಆರೋಪಿ ನಿನ್ನ ಮಗನಿಗೆ ಹೊಡೆದ ಸಮಯದಲ್ಲಿ ಯಾವುದೇ ರಕ್ತಗಾಯ ಆಗಿತ್ತ ಎಂದರೆ ರಕ್ತ ಗಾಯ ಆಗಿರಲಿಲ್ಲ ಆದರೆ ಬಾವು ಬಂದಿತ್ತು. ಆರೋಪಿ ನನ್ನ ಮಗನಿಗೆ ಹೊಡೆಯಲು ಬಂದಾಗ ನಾವು ತಡೆದಿರುತ್ತೇವೆ ಆದರೂ ಬಲವಂತವಾಗಿ ಆರೋಪಿ ನನ್ನ ಮಗನನ್ನು ಹೊಡೆದಿದ್ದಾನೆ ಎಂದು ನಾನು ದೂರಿನಲ್ಲಿ ಬರೆಸಿರುವುದಿಲ್ಲ.

ನನ್ನ ದೂರಿನಲ್ಲಿ ಹೇಳಿದಂತೆ ದಿಃ18-05-2021 ರಂದು ಸ. ನಂ ಃ 6 ರಲ್ಲಿ ಟ್ರಾಕ್ಟರ್ ನಲ್ಲಿ ಮೆಕ್ಕೆ ಜೋಳ ತುಂಬಿಕೊಂಡು ಹೋಗುತ್ತಿದ್ದೆವು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ -3 ಫೋಟೋಗೂ ಸ.ನಂಃ 6 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಹೌದು ಆದರೆ ನಾವು ಸದರಿ ಜಮೀನನ್ನು ದಾಟಿ ಬಂದಿರುತ್ತೇವೆ ಎಂದು ನುಡಿಯುತ್ತಾರೆ.

ನಾನು ಹೇಳಿದಂತೆ ಆರೋಪಿ ನನ್ನ ಮಗನಿಗೆ ದೊಣ್ಣೆಯಿಂದ ಹೊಡೆದಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗನಿಗೆ ಆರೋಪಿ ಹೊಡೆದ ಸಮಯದಲ್ಲಿ ನನ್ನ ಮಗ ಟ್ರಾಕ್ಟರ್ ನಿಂದ ಇಳಿಯುತ್ತಿದ್ದ. ಘಟನೆ ಸಮಯದಲ್ಲಿ ನನ್ನ ಮಗ ಟ್ರಾಕ್ಟರ್ ನಿಂದ ಇಳಿಯುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಮಗನಿಗೆ ಮಾರಣಾಂತಿಕ ಹಲ್ಲೆ ಮಾಡಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ಮಹಜರ್ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ಪ್ರಾ ಸಾ -2 ನನ್ನ ಮಗನಿಗೆ ಆದ ಗಾಯಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ನಮ್ಮ ಮತ್ತು ಆರೋಪಿಯ ಮಧ್ಯೆ ಇದ್ದ ಹಳೆಯ ದ್ವೇಷದಿಂದ ನನ್ನ ಮಗ ಟ್ರಾಕ್ಟರ್ ನಿಂದ ಬಿದ್ದು ಗಾಯಪಡಿಸಿಕೊಂಡಿದ್ದನ್ನು ಉಪಯೋಗಿಸಿಕೊಂಡು ಆರೋಪಿಯ ವಿರುದ್ಧ ಸುಳ್ಳು ಪರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ -1 ದೂರಿನಲ್ಲಿ ಹಳೆಯ ದ್ವೇಷ ಇತ್ತು ಎಂದು ಬರೆಸಿದ್ದು ಅದು ಸುಳ್ಳಾಗಿರುತ್ತದೆ. ನಿಪಿ -1 ರಲ್ಲಿ ಏನು ಬರೆಸಿದ್ದೇನೆ ಎಂದು ನನಗೆ ಗೊತ್ತಿಲ್ಲ ಎಂದರೆ ಹೌದು . ಯಾರೋ ಸಹಿ ಮಾಡು ಎಂದು ಹೇಳಿದ್ದರಿಂದ ನಿಪಿ -1 ಕ್ಕೆ ಸಹಿ ಮಾಡಿದ್ದೇನೆ ಎಂದರೆ ಹೌದು.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).